ತುರುಕಿಕೊಂಡು ಹಲ್ಲು ಕಡಿಯುತ್ತ ಗೌಡನ ಕಡೆಗೆ ಮತ್ತಷ್ಟು ಜೋರಾಗಿ ಓಡತೊಡಗಿದ. ಇವನು ಓಡಿಬರುತ್ತಿರುವ ರಭಸ ನೋಡಿ ಭಯಬಿದ್ದ ಗೌಡ ದಮ್ಮು ಆರಿಸಿಕೊಳ್ಳುವುದನ್ನು ನಿಲ್ಲಿಸಿ ಮತ್ತೆ ಓಡತೊಡಗಿದ. ಶೆಟ್ಟಿ 'ಎಲ್ಲಿಗೋಡ್ತಿ ನಿಲ್ಲಲೇ ಗೌರ.. ನಿಲ್ಲಲೇ ಗೌರ... ಕೊಟ್ ರಕ್ಕ ಕೊಡಾಕೇನ್ ಹಟ್ಟಾರನ್‌ಲೇ ನಿನ್ನ ಎಷ್ಟ್ ದಿಸ ಅಂತ ನನ್ ಕಾಡಿಸ್ತಿ, ನಿಲ್ಲಲೇ ನಿಮ್ಮೌನ್ ಒಣಧಿಮಾಕಿನ್ ಶುಳೆಮಗನೇ' ಎಂದು ಬೈಯುತ್ತ ಅವನ ಹಿಂದೆ ಓಡತೊಡಗಿದ. ಓಡುತ್ತ ಓಡುತ್ತ ಮತ್ತಷ್ಟು ದಮ್ಮು ಹತ್ತಿ ಎದೆ ಉರಿಯತೊಡಗಿ ಬಿಪಿ ಮತ್ತಷ್ಟು ಹೆಚ್ಚಾಗಿ ರೊಚ್ಚಿಗೆದ್ದು ಕಾಲಲ್ಲಿದ್ದ ಕೆರ ತೆಗೆದು ಗೌಡನೆಡೆಗೆ ಬೀಸಿ ಬಾಯಲ್ಲಿದ್ದುದನ್ನು ತುಪಕ್ ಎಂದು ನೆಲಕ್ಕುಗುಳಿ ಹೊರಹಾಕಿದ. ಅದು ಸೀದಾ ಹೋಗಿ ಗೌಡನ ಬೆನ್ನಿಗೆ ಬಿತ್ತು, ಗೌಡನಿಗೆ ಯಾವತ್ತೂ ಆಗದಷ್ಟು ಅವಮಾನವೆನಿಸಿತು. ಈಗಂತೂ ಅದೇ ಚಪ್ಪಲಿಗೆ ಹೇಸಿಗೆ ಮೆತ್ತಿ ಶೆಟ್ಟಿಯ ಬಾಯೊಳಗಿಡಬೇಕು ಎನ್ನುವಷ್ಟು ಸಿಟ್ಟು ಬಂದು ಕುದಿಯುತ್ತ ಅಲ್ಲೇ ನಿಂತ. ಶೆಟ್ಟಿ ಬೈಯುತ್ತ ಓಡಿಬರುತ್ತಲೇ ಇದ್ದ. ಇನ್ನೇನು ಅವನು ತನಗೆ ಮೂರ್ನಾಲ್ಕು ಮಾರಷ್ಟೇ ದೂರ ಇದ್ದಾನೆ ಎನ್ನುವಾಗ ಗೌಡ ಅಲ್ಲೇ ಇದ್ದ ಮಣ್ಣಿನ ಹೆಂಟೆಯೊಂದನ್ನು ತೆಗೆದುಕೊಂಡು ಶೆಟ್ಟಿಯತ್ತ ಜೋರಾಗಿ ಬೀಸಿದ. ಶೆಟ್ಟಿ ಆಘಾತದಿಂದ ತಪ್ಪಿಸಿಕೊಳ್ಳಲು ನೋಡಿದನಾದರೂ ಅಷ್ಟರಲ್ಲಿ ಗೌಡ ಎಸೆದ ಮಣ್ಣಿನ ಹೆಂಟಿ ಅವನ ಎಡಗಾಲಿನೆರಡು ಬೆರಳನ್ನು ಜಜ್ಜಿಯಾಗಿತ್ತು. 'ಯಪ್ಪೋ ಯಪ್ಪೋ' ಎಂದು ಹೊಯ್ಕೊಳ್ಳುತ್ತ ಕಾಲು ಹಿಡಿದುಕೊಂಡು ಅಲ್ಲೇ ನಿಂತ. ಗೌಡ ಅವನ ಕಡೆಗೊಮ್ಮೆ ಕೆಕ್ಕರಿಸಿ ನೋಡಿ, 'ಆ ಸುಳೆಮಗ ಮಾದರ್ ಕೆಂಚನ್ನ ಬುಡಬಾರ್ದ್ ಇವತ್ತು ಚಮ್ಡಾ ಚಮ್ಡಾ ಸುಲ್ದರೆ ರಕ್ಕ ಇಸ್ಕಬಕು' ಎಂದು ನಿರ್ಧರಿಸಿ ದಾಪುಗಾಲಿಟ್ಟುಕೊಂಡು ಕೇರಿಯ ಕಡೆಗೆ ಹೊರಟ

ಗೌಡ ಹಾಗೆ ಸಿಟ್ಟಿಗೆದ್ದು ಚರ್ಮಸುಲಿಯಲು ಹೊರಟಿರುವ ಕೆಂಚನ ಹೆಂಡತಿ ಸುಮಂಗ್ಲಿ ಈಗ ತಮ್ಮ ಕೇರಿಯ ಹಿಂದಿರುವ ಬೇಲಿ ಮರೆಯೊಂದರಲ್ಲಿ ತಮ್ತೆಂಡಿಗೆ ಕುಳಿತು ಹದಿನೈದು ದಿನದ ಹಿಂದೆ ಕೆಂಚ ತನ್ನ ಹಣೆಗೆ ಮಾಡಿದ್ದ ಗಾಯದ ಹಕಳೆ ತೆಗೆಯುತ್ತ ತನ್ನಿಷ್ಟದ ಧಾರಾವಾಹಿ ಪುಟ್ಟಗೌರಿ ಮದುವೆಯ ಗೌರಿಯ ಕುರಿತು ಕನಸು ಕಾಣುತ್ತಿದ್ದಾಳೆ. ಹಾಗೆ ನೋಡಿದರೆ ಅವಳು ದೊಡ್ಡವಳಾದ ವರ್ಷ ಶುರುವಾದ ಆ ಧಾರಾವಾಹಿ ಅವಳು ಕೆಂಚನನ್ನು ಮದುವೆಯಾಗಿ ವರ್ಷವಾಗಲಿಕ್ಕೆ ಬಂದಿದ್ದರೂ ಮುಗಿದಿಲ್ಲ. ಹಾಗಂತ ಅವಳಿಗೆ ಆ ಧಾರಾವಾಹಿಯ ಕುರಿತು ಕಿಂಚಿತ್ತೂ ಮನಸು ಕಮ್ಮಿಯಾಗಿಲ್ಲ. ತನ್ನ ತವರೂರು ಕರಕಲುಪುರದಲ್ಲಿದ್ದಾಗ ನಾಲ್ಕೆತ್ತಿನಗೌಡರ ಬಂಕದ ಕಿಟಕಿಗೆ ಆತು ನಿಂತು ತನ್ನ ಸ್ನೇಹಿತೆಯರೊಂದಿಗೆ ದಿನವೂ ತಪ್ಪದೆ ಪುಟ್ಟಗೌರಿ ಮದುವೆ ನೋಡುತ್ತಿದ್ದಳು. ಹಾಗೆ ನೋಡಿದರೆ ಕೆಂಚನೊಂದಿಗೆ ಅವಳ ಮದುವೆ ನಿಕ್ಕಿಯಾದಾಗ ಜೀವನಪೂರ್ತಿ ಕೆಂಚನ ಕಚ್ಚುಬಿದ್ದ ಮುಖ ಸಹಿಸಿಕೊಳ್ಳಬೇಕಲ್ಲಾ ಎನ್ನುವುದಕ್ಕಿಂತ ಜಾಸ್ತಿ ಇನ್ನುಮುಂದೆ ಪುಟ್ಟಗೌರಿಯನ್ನು ಎಲ್ಲಿ ನೋಡುವುದು ಎಂಬುದೇ ಚಿಂತೆಯಾಗಿತ್ತು ಅವಳಿಗೆ. ಆದರೆ ಉಡಿತುಂಬಿಕೊಳ್ಳುವ ರಾತ್ರಿಯಂದು ತನ್ನ ಗಂಡನ 'ಜನತಾ ಮನಿ' ಮುಂದಿರುವ ಟೈಲರ್ ಮಾಬುಸಾಬನ ಮನೆಯಿಂದ ನುಗ್ಗಿಬಂದ 'ಇದು ಪುಟ್ಟಗೌರಿ ಮದುವೆ' ಎಂಬ ಆರ್ತನಾದದಂಥ ಹಾಡನ್ನು ಕೇಳಿ ಅವಳಿಗೆ ಅದೆಷ್ಟು ಖುಷಿಯಾಯಿತೆಂದರೆ ಅವತ್ತಿನ ಫಸ್ಟ್ ನೈಟ್ ಕೆಂಚನ ಪಾಲಿಗೆ ಬೆಸ್ಟ್ ನೈಟ್ ಆಗಿಹೋಯಿತು. ಅವ್ವ ಅಪ್ಪ ಯಾರೆಂದೂ ಸರಿಯಾಗಿ ಗೊತ್ತಿಲ್ಲದೆ ತನಗೆ ಬುದ್ಧಿ ತಿಳಿದಾಗಿನಿಂದ ಒಬ್ಬರಾದ ಮೇಲೊಬ್ಬರು ಸಾಹುಕಾರರ ಕೊಟ್ಟಿಗೆಯಲ್ಲಿ ಜೀತಕ್ಕಿದ್ದು ದನಗಳೊಂದಿಗೆ ದನದಂತೆಯೇ ಬೆಳೆದಿರುವ ಅವನಿಗೆ ತಾನೂ ಒಬ್ಬ ಮನುಷ್ಯನೆಂದು ಅನಿಸಿದ್ದು ಅವತ್ತು ರಾತ್ರಿ ಸುಮಂಗ್ಲಿ ತನ್ನ ಕಚ್ಚುಬಿದ್ದ ಮುಖವನ್ನು ಲೊಚಲೊಚನೆ ನೆಕ್ಕಿದಾಗಲೇ. ಅದಾದ ಮರುದಿನದಿಂದ ಸುಮಂಗ್ಲಿ ಮಾಬುಸಾಬನ ಮನೆ ಬಂಕದ ಕಿಟಕಿಗೆ ಆತು ನಿಂತು ತನ್ನ ಪ್ರೀತಿಯ ಪುಟ್ಟಗೌರಿಯನ್ನು ನೋಡತೊಡಗಿದಳು.

ಇವತ್ತು ಅವಳು ಈಗಾಗಲೇ ಯಾರೋ ಮಾಡಿ ಹೋಗಿರುವ ಹೇಸಿಗೆಯ ಪಕ್ಕ ಕುಳಿತಿದ್ದರೂ ಚೂರೂ ಮುಖ ಸಿಂಡರಿಸಿಕೊಳ್ಳದೆ ಪುಟ್ಟಗೌರಿಯ ಕುರಿತು ಯೋಚಿಸಲಿಕ್ಕೆ ಕಾರಣ ಕೆಂಚ ನೆನ್ನೆ ರಾತ್ರಿ ಹೇಳಿದ್ದ ಗುಟ್ಟು ಎಂದೇ ಹೇಳಬಹುದು. ರಾತ್ರಿ ಎಷ್ಟೋ ಹೊತ್ತಿಗೆ ಬಂದ ಅವನು ಅವಳ ಪಕ್ಕ ಮಲಗಿ ಕುಂಡಿಗೆ ಕೈ ಹಾಕಿ ಹಿಚುಕುತ್ತ 'ನಿಮ್ಮೌನ್ ನಾಳೆ ರಾತ್ರಿ ಬೆಂಗಳೂರಿಗೆ ಹೋಗಮು ವಾಪಸ್ ಇಲ್ಲಿಗ್ ಬರಾದ ಬ್ಯಾಡಾ ಸಾಕ್ಯಾಗೇತಿ ಇಲ್ ಸತ್ತು ಸತ್ತು ಅದ್ಕಾ ಎಲ್ಲಾ ಗಂಟ್ ಕಟಿಗ್ಯಾ... ಮತ್ಯಾ ಇಲ್ ನೋಡು . ಯಾರ್ ಮುಂದ್ ಸೈತ ಹೇಳ್ಬ್ಯಾಡ್ ಇದ್ನಾ...' ಎಂದ. ಅವಳು, 'ನಾನ್ಯಾಕ್ ಹೇಳ್ಲ್ಯೋಗಾ?' ಎಂದಳು. ಅವನು 'ಹ್ಞೂ ಆಮೇಲ್ ಬಾಯ್ ಸುಮ್ನಿರ್ಲಿಲ್ಲ ಅಂತ ಹೇಳಿದ್ರ ಹಂಗಿಗಲ್ಲ.. ಈ ನಿನ್ ತುಲ್ ಹರ್ಯಾಂಗಾ ಹಟ್ಬುಡುತ್ನ' ಎಂದು ಜಬರಿಸಿ ಅವಳ ಕುಬ್ಬುಸಕ್ಕೆ ಬಾಯಿ ಹಾಕಿ ಕಡಿಯತೊಡಗಿದ್ದ. ಆ ಕ್ಷಣದಿಂದ ಅವಳಿಗೆ ಪುಟ್ಟಗೌರಿಯದೇ ಕನಸು. ಬೆಂಗಳೂರಿಗೆ ಹೋದರೆ ಗೌರಿಯನ್ನು ಹುಡುಕಿ ನೋಡಬಹುದು, ಮಾತನಾಡಿಸಬಹುದು, ತಾನು ಅವಳ ಧಾರಾವಾಹಿಯನ್ನು ಒತ್ತಟಿಯಿಂದ ನೋಡಿದ್ದೇನೆಂದು ಹೇಳಿ ಖುಷಿಪಡಿಸಬಹುದು, ಅವಳು ಹಾಕುವ ಸೀರೆಯಂಥದ್ದೇ ಒಂದು ಸೀರೆಯನ್ನು ತನಗೂ ಉಡಲು ಆಸೆಯಿದೆಯೆಂದು ಹೇಳಬಹುದು, ಅವಳು ಬಳಸುವ ಪೌಡರಿನ ಹೆಸರೇನು ಎಂದು ಕೇಳಬಹುದು ಎಂದು ನೂರೆಂಟು ಕಲ್ಪನೆಗಳಲ್ಲಿ ತೇಲಿ ಹೋಗಿದ್ದ ಅವಳಿಗೆ ಕೆಂಚ ತನ್ನನ್ನು ಅಂಗಾತ ಬೀಳಿಸಿ ಹಣಿಯುತ್ತಿದ್ದುದರ ಪರಿವೇ ಇರಲಿಲ್ಲ.

ಸುಮಂಗ್ಲಿ ತಮ್ತೆಂಡಿ ಮುಗಿಸಿ ಆ ಜಾಗದಿಂದ ಎದ್ದು ಕೇರಿಗೆ ಬಂದಳು. ಇನ್ನು ಎಂಟುಗಂಟೆಯಾಗಿತ್ತಾದರೂ ಆಗಲೇ

# ನನ್ನ ಕನ್ನಡ


**ವಿಶ್ವನಾಥ ಸುಂಕಸಾಳ,**
ಉಪನ್ಯಾಸಕ
ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ,
ತ್ರಿಪುರ




## ಕನ್ನಡ ಎನ್ನುವ ಹುಟ್ಟುಮಚ್ಚೆ

ಪರರಾಜ್ಯವಾಸಿಯಾದ ಅನಂತರ ನನ್ನ ವ್ಯಕ್ತಿತ್ವ, ಚಿಂತನೆಗಳಲ್ಲಿ ಕನ್ನಡವು ಹೇಗೆ ಅಂತರ್ಯಾಮಿಯಾಗಿ ನನ್ನನ್ನು ಸಂಪೂರ್ಣ ಆವರಿಸಿಬಿಟ್ಟಿದೆ ಎಂಬುದು ಹೆಚ್ಚು ಸ್ಪಷ್ಟವಾಯಿತು. ನಾವು ಯಾವುದೇ ಭಾಷೆಯಲ್ಲಿ ವ್ಯವಹರಿಸಿದರೂ ನಮ್ಮ ಚಿಂತನೆಗಳೆಲ್ಲ ಮೊದಲು ರೂಪಿತವಾಗುವುದು ನಮ್ಮ ಮಾತೃಭಾಷೆಯಲ್ಲೇ. ಆಮೇಲೆ ಅದನ್ನೇ ಬೇರೆ ಭಾಷೆಗಳಿಗೆ ತರ್ಜುಮೆ ಮಾಡಿಕೊಂಡು ವ್ಯವಹರಿಸುತ್ತಿರುತ್ತೇವೆ. ಮಾತೃಭಾಷೆಯೆಂದರೆ ಅದು ಸಹಜವಾಗಿಯೇ ತೋರಿಕೊಂಡು ಸದಾಕಾಲ ನಮ್ಮ ಜೊತೆಗೇ ಇರುವ ಮಚ್ಚೆಯಂತೆ. ಉಳಿದೆಲ್ಲ ಭಾಷೆಗಳು ನಾವು ಬಲವಂತವಾಗಿ ಹಾಕಿಕೊಳ್ಳುವ ಹಚ್ಚೆಯಿದ್ದಂತೆ. ಕನ್ನಡವೆಂದರೆ ನನ್ನ ಮಟ್ಟಿಗೆ ಮಚ್ಚೆಯೇ. ಹಾಗಾಗಿಯೇ ಅದು ನನ್ನ ಗುರುತೂ ಹೌದು.

ಸಂಸ್ಕೃತವನ್ನು ಓದಲು ತೊಡಗಿದ ಮೇಲೆ ಕನ್ನಡದ ಮಹತ್ತ್ವ, ವೈಶಾಲ್ಯ, ಔದಾರ್ಯ, ಅದು ನಮ್ಮೊಳಗೆ ಬಿತ್ತುವ ಸಂಸ್ಕಾರದ ಬಗ್ಗೆ ಇನ್ನಷ್ಟು ಅರ್ಥವಾಯಿತು. ಒಂದು ಭಾಷೆ ತನ್ನ ಜೊತೆ ಒಂದು ಸಂಸ್ಕೃತಿಯನ್ನೂ ಹೊತ್ತು ತಂದಿರುತ್ತದೆ. ನಾನು ಇಂಥ ಕನ್ನಡದ ಸಂಸ್ಕೃತಿಯವ ಎಂದು ಗುರುತಿಸಿಕೊಳ್ಳುವಾಗೆಲ್ಲ ನನ್ನೊಳಗೆ ಆಗುವ ಪುಳಕ ಅನಿರ್ವಚನೀಯವಾದುದು. ಕನ್ನಡವನ್ನು ಬಿಟ್ಟು ಒಂದರೆಕ್ಷಣವಾದರೂ ನಾನಿರಬಲ್ಲೆನಾ ಎಂಬ ಪ್ರಶ್ನೆಯನ್ನು ಹಲವು ಬಾರಿ ಕೇಳಿಕೊಂಡಿದ್ದೇನೆ. ಆ ಪ್ರಶ್ನೆ ಕೂಡ ಕನ್ನಡದಲ್ಲೇ ಇದೆ ಎಂದು ಅರ್ಥವಾದ ದಿನ ಹಾಗೆ ಯೋಚಿಸುವುದನ್ನು ಬಿಟ್ಟಿದ್ದೇನೆ. ಕನ್ನಡವು ನನ್ನ ವ್ಯಕ್ತಿತ್ವದ ಕೋಶದಲ್ಲಿ ಸುರಕ್ಷಿತವಾಗಿರಲಿದೆ. ಅದಕ್ಕೆ ಅಳಿವಿಲ್ಲ.